




ಮುಂದಿನ ವರ್ಷವಾದರೂ ಬರಬಹುದೆಂದೂ ಸಂಭಾಷಣೆ ನಡೆಯಿತು. ಇತ್ತೀಚಿನ ದಿನಗಳಲ್ಲಿ ಮನೆಗೆ ನೆಂಟರು ಬರಲಿಲ್ಲ ಎಂದರೂ ಫೋನ್ ಮಾಡಿ ವಿಚಾರಿಸುವ ಕಕ್ಕುಲತೆ ಕಾಣದಾಗಿದೆ. ಅಂತಹುದರಲ್ಲಿ ಜೇನು ಬರಲಿಲ್ಲ ಎಂದು ಒಬ್ಬರಿಗೊಬ್ಬರು ಫೋನ್ ಮಾಡಿ ವಿಚಾರಿಸಿದ್ದೂ ಅಲ್ಲದೆ, ಜೇನುಗಳು ಇಂದಲ್ಲ ನಾಳೆ ಬರಬಹುದು ಎಂದು ಆಶಾಭಾವನೆಯ ಸಂಭಾಷಣೆ ನಡೆಸುವುದು ನಮಗೆ ತೀರಾ ಹೊಸದಾಗಿತ್ತು. ಆದರೆ ಜೇನಿನ ಒಡನಾಟ ನಮಗೇನು ಹೊಸದಾಗಿರಲಿಲ್ಲ.

ನಾನು ವೃತ್ತ ಕಚೇರಿಯಲ್ಲಿದ್ದಾಗ ನಾಲ್ಕನೇ ಮಹಡಿಯಲ್ಲಿದ್ದ ನನ್ನ ಕಿಟಕಿಯ ಪಕ್ಕದಲ್ಲೇ ಕಟ್ಟಿದ್ದ ಹೆಜ್ಜೇನಿನ ಗೂಡು ಮೊದ ಮೊದಲು ಸಹೋದ್ಯೋಗಿಗಳಿಗೆ ಭಯ ಹುಟ್ಟಿಸಿತ್ತು. ಅನೇಕ ಸಲ ನಾನು ಕಿಟಕಿ ಬಳಿ ನೋಡುತ್ತಾ ನಿಂತರೆ, ಅವುಗಳ ಪಾಡಿಗೆ ಕೆಲಸದಲ್ಲಿ ನಿರತರಾಗಿದ್ದ ಜೇನುಗಳು ನನಗೆ ಚಟುವಟಿಕೆಯ ಪಾಠ ಹೇಳಿಕೊಡುವಂತೆ ಕಾಣುತ್ತಿತ್ತು.

ನಾಲ್ಕು ನೂರು ಉದ್ಯೋಗಿಗಳು ಇದ್ದ ಆ ಕಚೇರಿಯಲ್ಲಿ ಜೇನುಗೂಡು ಇಟ್ಟುಕೊಳ್ಳುವುದು ತೀರಾ ಅಪಾಯಕಾರಿ ಎಂದು ಸಹೋದ್ಯೋಗಿಗಳು ಭಾವಿಸಿ, ಒಂದು ದಿನ ಅದನ್ನು ತೆರವುಗೊಳಿಸಲು ಪರಿವೀಕ್ಷಣೆಗೆಂದು ನಮ್ಮ ಕೊಠಡಿಗೆ ಕಟ್ಟಡ ನಿರ್ವಹಣಾ ಸಿಬ್ಬಂದಿ ಬಂದರು. ಎಲ್ಲಿ ಹೊಗೆ ಹಾಕುವುದು? ಎಷ್ಟು ಜೇನು ಸಿಗಬಹುದು? ಎಂದು ಮಾತಾಡಿಕೊಂಡರು. ಜೇನುತುಪ್ಪ ನನಗೆ ವರ್ಜ್ಯವೇನಲ್ಲ. ಆದರೆ ತಮ್ಮ ಪಾಡಿಗೆ ತಾವಿದ್ದ ಆ ಜೇನುಗಳನ್ನು ಕದಲಿಸುವುದು ನನಗೆ ಸುತರಾಂ ಇಷ್ಟವಿರಲಿಲ್ಲ. ಅಲ್ಲದೆ ಇರುವ ಎತ್ತರದ ಮರಗಳನ್ನೆಲ್ಲ ಧರೆಗುರುಳಿಸಿ ಗಗನಚುಂಬಿ ಕಟ್ಟಡಗಳು ನಿಂತಿರುವಾಗ ಹೇಗೋ ತಮ್ಮ ಬದುಕು ನಡೆಸಲು ಕಟ್ಟಡಗಳನ್ನೇ ಗೂಡು ನಿರ್ಮಿಸಲು ಉಪಯೋಗಿಸಿಕೊಳ್ಳುವ ಅವುಗಳ ಅಸಹಾಯಕತೆ ಮರುಕ ಹುಟ್ಟಿಸುತ್ತದೆ. ಕೆಣಕದೆ ಇದ್ದರೆ ಜೇನುಹುಳುಗಳು ನಿರಪಾಯಕಾರಿ ಎಂದು ಬಂದವರಿಗೆ ವಾದ ವಿವಾದದ ಮೂಲಕ ಮನವರಿಕೆ ಮಾಡಲು ಪ್ರಯತ್ನಿಸಿದೆನಾದರೂ, ಅವರು ಗೂಡು ತೆರವುಗೊಳಿಸುವ ತಮ್ಮ ಯೋಜನೆ ಕಾರ್ಯರೂಪಕ್ಕೆ ತರದೇ ಬಿಡುವುದಿಲ್ಲ ಎಂದು ನನಗೆ ಖಾತ್ರಿಯಾಯಿತು.

ಏನು ಮಾಡಲಿ?

ಹುಚ್ಚು ಸಾಹಸ ಪ್ರವೃತ್ತಿ ನನ್ನದಲ್ಲವಾದರೂ ಕೆಲವೊಮ್ಮೆ ನಿರ್ವಾಹವಿಲ್ಲದಂತಾಗುತ್ತದೆ. ಸರಿ, ಕೈ ಚಾಚಿದರೆ ಎಟಕುವಂತಿದ್ದ ಗೂಡಿನ ಬಳಿ ಹೋಗಿ ಕಿಟಕಿ ಗಾಜು ಸರಿಸಿ ನನ್ನ ಕೈಯನ್ನು ಹೊರಚಾಚಿ, 'ನೋಡಿ! ಪಾಪ ಏನೂ ಮಾಡುವುದಿಲ್ಲ!' ಎಂದೆ. ದಿನಾ ಕಿಟಕಿಯ ಬಳಿ ನಿಂತು ನೋಡುತ್ತಿದ್ದ ನನ್ನ ಮುಖ ಪರಿಚಯ ಇತ್ತೋ ಏನೋ ಎಂಬಂತೆ ಜೇನುಗಳು ಸದ್ಯ ತಮ್ಮ ಪಾಡಿಗೆ ತಾವು ಕೆಲಸದಲ್ಲಿ ನಿರತರಾಗಿ ನನ್ನ ಮರ್ಯಾದೆ ಉಳಿಸಿದವು. ಪರಿವೀಕ್ಷಣಾ ಪಡೆ, ಅಚ್ಚರಿಯ ಕಣ್ಣು ಬಿಟ್ಟು ಜೇನುಗೂಡಿನ ತೆರವು ಕಾರ್ಯಾಚರಣೆ ತಡೆಹಿಡಿದು ಏನೋ ಗೊಣಗುತ್ತಾ ತಮ್ಮ ಪಾಡಿಗೆ ಹೊರಟು ಹೋದರು. ಭಾನುವಾರ ಹಾಗೂ ಇತರ ರಜಾ ದಿನ ಮುಗಿದು ಬಂದ ಕೂಡಲೇ ಸದ್ಯ ಜೇನುಗೂಡಿಗೆ ಧಕ್ಕೆಯಾಗಿಲ್ಲವಲ್ಲ ಎಂದು ಖಚಿತಪಡಿಸಿಕೊಳ್ಳುತ್ತಿದ್ದೆ. ವಿಪರ್ಯಾಸವೆಂದರೆ, ಹೀಗೆ ಸುಮಾರು ಎರಡು ವರ್ಷಗಳ ಕಾಲ ಸಹಬಾಳ್ವೆ ನಡೆಸಿ ಯಾರೊಬ್ಬರಿಗೂ ಕಚ್ಚದ ಜೇನುಗಳನ್ನು ನಾನು ವೃತ್ತ ಕಚೇರಿಯಿಂದ ವರ್ಗಾವಣೆಯಾದ ಎರಡೇ ವಾರಗಳಲ್ಲಿ ಹೊಗೆ ಹಾಕಿ ಕೀಳಿಸಲಾಯಿತೆಂದು ತಿಳಿಯಿತು.

ಇದಲ್ಲದೆ ನಮ್ಮ ಮನೆಯಲ್ಲಿ ಮಹಡಿಯ ಕಿಟಕಿಯಲ್ಲಿ ರಸ್ತೆಗೆ ಕಾಣುವಂತೆ ಹೆಜ್ಜೇನುಗಳು ಗೂಡು ಕಟ್ಟಲು ಶುರು ಮಾಡಿದ್ದವು. ಸಾಧಾರಣ ಜೇನುಗಳಿಗಿಂತ ಇವುಗಳ ಗಾತ್ರ ಹಾಗೂ ಗೂಡಿನ ಗಾತ್ರ ಎರಡೂ ಹಿರಿದಾಗಿತ್ತು. ಹೆಜ್ಜೇನುಗಳು ಹೆಚ್ಚು ಭಯ ಹುಟ್ಟಿಸುತ್ತವೆ. ನನ್ನ ಮಗಳು ಆಗ ತೀರಾ ಸಣ್ಣವಳಾಗಿದ್ದರಿಂದ ಗೂಡು ಕಟ್ಟುತ್ತಿದ್ದ ಹೆಜ್ಜೇನುಗಳನ್ನು ಕಂಡ ಮೊದಲಿಗೇ ಎಲ್ಲರೂ ಬಂದು 'ಹೆಜ್ಜೇನು ನಿಮ್ಮ ಮನೆಯಲ್ಲಿ ಗೂಡು ಕಟ್ಟುತ್ತಿದೆ. ಅತ್ಯಂತ ಅಪಾಯಕಾರಿ. ತೆಗೆಸಿಬಿಡಿ' ಎಂದು ಎಚ್ಚರಿಸಿ ಹೋದರು.



ಚಿಕ್ಕವಳಾಗಿದ್ದಾಗ ನಮ್ಮ ಮನೆಯಲ್ಲಿ ಟೇಪ್ ರೆಕಾರ್ಡರ್‌ನಲ್ಲಿ ಆಗಾಗ್ಗೆ ಕೇಳುತ್ತಿದ್ದ ಚಿ. ಉದಯಶಂಕರ್ ಅವರ ರಚನೆಯ ಎರಡು ಚಿತ್ರಗೀತೆಗಳು ನನ್ನ ಮನದ ಮೂಲೆಯಲ್ಲಿ ಆಗಾಗ ಧ್ವನಿಸುತ್ತವೆ. ಒಂದು, 'ಗಿರಿಕನ್ಯೆ' ಚಿತ್ರದ 'ಏನೆಂದು ನಾ ಹೇಳಲಿ... ಜೇನುಗಳೆಲ್ಲಾ ಅಲೆಯುತ ಹಾರಿ ಕಾಡೆಲ್ಲಾ... ಹನಿಹನಿ ಜೇನು, ಸೇರಿಸಲೇನು, ಬೇಕು ಎಂದಾಗ ತನದೆನ್ನುವಾ...' ಎನ್ನುವ ರಾಜಕುಮಾರ್ ಧ್ವನಿಯಲ್ಲಿನ ಗೀತೆ. ಇನ್ನೊಂದು, 'ಮರೆಯಲಾಗದ ಕಥೆ' ಚಿತ್ರದ. 'ಮಾತನ್ನು ಬಲ್ಲ ಮನುಜನಿಗಿಂತ ಕ್ರೂರಿಗಳಿಲ್ಲ ಸ್ವಾರ್ಥಿಗಳಿಲ್ಲ, ಮಾತೇ ಬರೆದ ಪ್ರಾಣಿಗಳೆಂದೂ ಕೆಣಕದೇ ಹಾನಿ ಮಾಡುವುದಿಲ್ಲ' ಎಂದು ವಾಣಿ ಜಯರಾಂ ಜೀವ ತುಂಬಿರುವ ಹಾಡು. ಬಹುಶಃ, ಇವುಗಳ ಪ್ರಭಾವದಿಂದಾಗಿ ನಾನು ಜೇನುಗೂಡನ್ನು ತೆರವುಗೊಳಿಸಲು ಯೋಚಿಸಲಿಲ್ಲ. ಯಜಮಾನರೂ 'ಹೋಗಲಿ' ಎಂದು ಸುಮ್ಮನಾದರು.

ಕೆಲವೊಮ್ಮೆ ಕತ್ತಲಾದ ಮೇಲೆ ಯಾವುದೋ ಕಿಟಕಿ ಸ್ವಲ್ಪ ತೆರೆದಿದ್ದರೆ, ಬೆಳಕಿಗಾಗಿ ಇಪ್ಪತ್ತು ಮೂವತ್ತು ಜೇನುಗಳು ಒಳಬಂದು ಮನೆ ತುಂಬಾ ಗುಂಯ್ ಗುಂಯ್ ಎಂದು ಹಾರಾಡುತ್ತಾ



ಜೇನುಗಳಿಗೆ ಅಹಿತಕಾರಿಯಾಗಿರುವ 'ಆಫ್ರಿಕನ್ ಟ್ಯುಲಿಪ್'

